**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 230/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಮೂರ್ತಪ್ಪ | ಪ್ರಾ ಸಾಃ 3 |
| ತಂದೆಯ/ಗಂಡನ ಹೆಸರು | : | ಚಿಕ್ಕಣ್ಣ | ಚಾಸಾಃ 4 |
| ವಯಸ್ಸು | : | 55 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಆವಿನಹಟ್ಟಿ | ದಿಃ17.04.2026 |

**(ನ್ಯಾಯಾಲಯದ ಆವರಣದಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ಮತ್ತು ಕಕಕ್ಷಿದಾರರನ್ನು ಹೊರತುಪಡಿಸಿ ಇತರೆ ಎಲ್ಲಾ ವಕೀಲರು ಮತ್ತು ಕಕ್ಷಿದಾರರನ್ನು ಹೊರಗೆ ಕಳುಹಿಸಿ ಸಾಕ್ಷ್ಯ ದಾಖಲಿಸಲಾಯಿತು. )**

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ.1 ನನ್ನ ಪತ್ನಿ. ಚಾಸಾ.5 ರವರು ಗೊತ್ತು. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರು ಗೊತ್ತು. ಗೈರು ಹಾಜರಾಗಿರುವ 3 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

2. 2022 ನೇ ಸಾಲಿನಲ್ಲಿ ಸಂಜೆ 5.30 ರಿಂದ 6 ಗಂಟೆಯ ಸಮಯದಲ್ಲಿ ನಾನು ಕೆಲಸದ ನಿಮಿತ್ತ ಬೇರೆ ಕಡೆ ಹೋಗಿದ್ದೆನು. ಆಗ ಆರೋಪಿತರು ಪಿಟ್ ಗುಂಡಿ ತೆಗೆಯಲು ಬಂದಿದ್ದು, ಚಾಸಾ.1 ರವರು ಕೇಳಿದಾಗ ಎಲ್ಲಾ ಆರೋಪಿತರು ಚಾಸಾ.1 ರವರಿಗೆ ಬೋಸುಡಿ, ಸೂಳೆ ಮುಂಡೆ ಎಂದು ಅವಾಚ್ಯ ಶಬ್ಧಗಳಿಂದ ಬೈದು, ಎಲ್ಲಾ ಆರೋಪಿತರು ಚಾಸಾ.1 ರವರ ಸೀರೆಯನ್ನು ಹಿಡಿದು ಎಳೆದಾಡಿ, ತಲೆ ಕೂದಲು ಹಿಡಿದು ಎಳೆದಾಡಿ, ಹಲ್ಲೆ ಮಾಡಿರುತ್ತಾರೆ. ಆಗ ನನಗೆ ಚಾಸಾ.5 ರವರು ಗಲಾಟೆಯ ಕುರಿತು ದೂರವಾಣಿ ಮೂಲಕ ತಿಳಿಸಿದ್ದು, ನಾನು ಸ್ಥಳಕ್ಕೆ ಬಂದೆನು. ಮೂರು ಜನ ಆರೋಪಿತರು ಚಾಸಅ.1 ರವರಿಗೆ ಕೋಲಿನಲ್ಲಿ ಹೊಡೆಯುತ್ತಿದ್ದು, ನನ್ನನ್ನು ನೋಡಿ ಹೋದರು. ಎಲ್ಲಾ ಆರೋಪಿತರು ಹೋಗುವಾಗ ಚಾಸಅ.1 ರವರಿಗೆ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಚಾಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ದೂರು ನೀಡಿದ ನಂತರ ಪೊಲೀಸರು ಮಹಜರನ್ನು ಜರುಗಿಸಲು ಸ್ಥಳಕ್ಕೆ ಬಂದಿದ್ದು, ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ.2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 3.30 ರಿಂದ 4 ಗಂಟೆಯವರೆಗೆ ಸ್ಥಳಪಂಚನಾಮೆಯನ್ನು ಜರುಗಿಸಿರುತ್ತಾರೆ. ಮಹಜರಿನ ಸಮಯದಲ್ಲಿ ಪೊಲೀಸರು ಕೋಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿ ನಿಪಿ.2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.3 ರ ಛಾಯಾಚಿತ್ರದಲ್ಲಿ ತನ್ನ ಮತ್ತು ಚಾಸಾ.2 ಮತ್ತು 3 ರವರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ರ ಕೋಲುಗಳನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು 2022 ನೇ ಸಾಲಿನ 17 ನೇ ತಾರೀಕಿನಂದು ಮಾಡಿರುತ್ತಾರೆ. ಮಹಜರಿನ ಕಾಲಕ್ಕೆ ಕಚ್ಛಾ ನಕಾಶೆಯನ್ನು ತಯಾರಿಸಿರುತ್ತಾರೆ. ಈ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ಗಲಾಟೆ ದಿನಾಂಕ 17.11.2022 ರಂದು ನಡೆದಿರುತ್ತದೆ ಎಂದರೆ ಸರಿ. ಮಹಜರನ್ನು ಗಲಾಟೆ ನಡೆದ ಮರುದಿನ ಅಂದರೆ 18.11.2022 ರಂದು ಜರುಗಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರಿ ಕೆ.ವಿ.ಎನ್. ವಕೀಲರಿಂದ**

4. ಗಲಾಟೆ 2022 ನೇ ಸಾಲಿನಲ್ಲಿ ನಡೆದಿರುತ್ತದೆ. ನಾವು ವಾಸವಾಗಿರುವ ಮನೆ ನಿಪಿ.3 ರ ಛಾಯಾಚಿತ್ರದಲ್ಲಿ ಇದೆ ಎಂದರೆ ಸರಿ. ಸುಮಾರು 10 -15 ವರ್ಷಗಳಿಂದ ನಾವು ಅದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನಾವು ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಮನೆಯನ್ನು ನಿರ್ಮಿತಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮಗೆ ಸೇರಿದ ಜಾಗ ಎಂಬ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಇ-ಸ್ವತ್ತು ಮತ್ತು ಖಾತೆಯನ್ನು ಪಡೆದುಕೊಂಡಿದ್ದೇನೆ. ನಮ್ಮ ಮನೆಯ ಮುಂಬಾಗದ ಜಾಗ ಸಾರ್ವಜನಿಕ ಜಾಗ ಎಂದರೆ ಸರಿಯಲ್ಲ. ನಾವು ಸಾರ್ವಜನಿಕ ರಸ್ತೆಯಲ್ಲಿ ಮನೆಯನ್ನು ಕಟ್ಟಿಕೊಂಡಿದ್ದು, ಸದರಿ ಮನೆಯನ್ನು ತೆರವುಗೊಳಿಸಿ ಎಂದು ಊರಿನ ಗ್ರಾಮಸ್ಥರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಅರ್ಜಿಗಳನ್ನು ನೀಡಿದ್ದರು ಎಂದರೆ ಸರಿ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು 7 ದಿನಗಳ ಒಳಗಾಗಿ ಮನೆಯನ್ನು ತೆರವುಗೊಳಿಸುವಂತೆ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿತರು ನಮಗೆ ಸೇರಿದ ಜಾಗದಲ್ಲಿ ಲೆಟ್ರಿನ್ ಫಿಟ್ ಗುಂಡಿಯನ್ನು

ತೆಗೆದಿಲ್ಲ ಎಂದರೆ ಸಾಕ್ಷಿ ತೆಗೆಯಲು ಬಂದಿದ್ದರು, ಆಗ ಗಲಾಟೆ ಆಗಿದೆ ಎಂದು ಹೇಳುತ್ತಾರೆ. ಆರೋಪಿತರು ಆರ್.ಸಿ.ಸಿ. ಮೇಲ್ಛಾವಣಿಯಿಂದ ಕೂಡಿದ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿ. ಆರೋಪಿತರು ಚಾಸಾ.1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಚಾಸಾ.1 ರವರ ಸೀರೆಯನ್ನ ಹಿಡಿದು ಎಳೆದಾಡಿಲ್ಲ ಮತ್ತು ಕಟ್ಟಿಗೆಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ರವರಿಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಚಾಸಾ.5 ರವರು ನಮ್ಮ ಸಂಬಂಧಿಕರು ಎಂದರೆ ಸರಿ. ಚಾಸಾ.5 ರವರು ಗಲಾಟೆಯನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ.5 ರವರನ್ನು ಈ ಪ್ರಕರಣದಲ್ಲಿ ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯನ್ನು ಮಾಡಲು ಬಂದಾಗ ಪೊಲೀಸರಿಗೆ ನಾನೇ ಸ್ಥಳವನ್ನು ತೋರಿಸಿದ್ದೇನೆ. ಸ್ಥಳ ಪಂಚನಾಮೆಯ ಕಾಲಕ್ಕೆ ಚಾಸಾ.2 ಮತ್ತು 3 ರವರು ಇದ್ದರು. ಚಾಸಾ.2 ಮತ್ತು 3 ರವರು 2015 ರಿಂದ 2020 ರ ಅವಧಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿ. ಚಾಸಾ.2 ಮತ್ತು 3 ರವರಿಗೆ ರಸ್ತೆ ಕಾಮಗಾರಿ ಮತ್ತು ಚರಂಡಿ ಕಾಮಗಾರಿ ಮಾಡಲು ನಾನು ಹಣದ ನೆರವನ್ನು ನೀಡುತ್ತಿದ್ದೆನು ಎಂದರೆ ಸರಿಯಲ್ಲ. ಮುದ್ದೆಮಾಲು ನಂ.1 ಮತ್ತು 2 ರ ಕೋಲುಗಳು ಎಲ್ಲಾಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರ ಕೋಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ